

ದಕ್ಷಿಣ ಕನ್ನಡ ಜಿಲ್ಲೆಯ ಕರುಂಬಿತ್ತಿಲ್‌ನಲ್ಲಿ ಹುಟ್ಟಿ ಸಂಗೀತ ಕ್ಷೇತ್ರಕ್ಕೆ ಪ್ರವೇಶಿಸಿದ ವಯೊಲಿನ್ (ಪಿಟೀಲು) ವಿದ್ವಾಂಸ ವಿಠ್ಠಲ ರಾಮಮೂರ್ತಿ ಅವರು ಪ್ರಸ್ತುತ ದೇಶ–ವಿದೇಶಗಳಲ್ಲಿ ಗುರುತಿಸಿಕೊಂಡಿರುವ ಪ್ರಸಿದ್ಧ ವಯೊಲಿನ್ ವಾದಕರು. ವಯೊಲಿನ್ ವಾದನ ಮತ್ತು ಸಂಗೀತ ಶಿಕ್ಷಣದಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವ ಅವರು ವರ್ಷಕ್ಕೊಮ್ಮೆ ತಮ್ಮ ಮನೆಯಲ್ಲಿ ನಡೆಸುವ 'ಕರುಂಬಿತ್ತಿಲ್ ಸಂಗೀತ ಶಿಬಿರ'ವು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧವಾಗಿದೆ. ದೇಶದ ಪ್ರಸಿದ್ಧ ಸಂಗೀತಗಾರರು ಈ ಶಿಬಿರದಲ್ಲಿ ಭಾಗವಹಿಸಲು ಉತ್ಸಾಹ ತೋರುತ್ತಾರೆ ಭಾರತೀಯ ಸಂಗೀತ ಲೋಕದ ದಿಗ್ಗಜ ಲಾಲ್‌ಗುಡಿ ಜಿ. ಜಯರಾಮನ್ ಅವರೊಡನೆ ಗುರುಕುಲ ಮಾದರಿಯಲ್ಲಿ ಸಂಗೀತ ಶಿಕ್ಷಣ ಪಡೆದ ವಿದ್ವಾನ್ ವಿಠ್ಠಲ ರಾಮಮೂರ್ತಿ ಅವರು, ಅಮೆರಿಕ, ಕೆನಡಾ, ಆಸ್ಟ್ರೇಲಿಯಾ ಮತ್ತು ಫ್ರಾನ್ಸ್‌ನಲ್ಲಿ ವಿದ್ಯಾರ್ಥಿಗಳನ್ನು ಹೊಂದಿದ್ದಾರೆ. ಸಂಗೀತಶಾಸ್ತ್ರಜ್ಞರಾಗಿ, ಅವರು ಹೂಸ್ಟನ್‌ನ ರೈಸ್ ವಿಶ್ವವಿದ್ಯಾಲಯ, ಮಾಂಟ್ರಿಯಲ್‌ನ ಕಾನ್ಕಾರ್ಡಿಯಾ ವಿಶ್ವವಿದ್ಯಾಲಯ ಮತ್ತು ಬೋಸ್ಟನ್‌ನ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಭಾರತೀಯ ಸಂಗೀತ ಕಲೆಯ ಶಿಕ್ಷಣವನ್ನು ಹೊಸತಲೆಮಾರಿಗೆ ನೀಡುವ ಕಾಯಕದಲ್ಲಿ ತೊಡಗಿಸಿಕೊಂಡಿದ್ದಾರೆ. ಪ್ರತೀವರ್ಷ ಅರಿಜೋನಾದಲ್ಲಿ ನವೆಂಬರ್ 5 ಅನ್ನು ವಿಠ್ಠಲ ರಾಮಮೂರ್ತಿ ದಿನ ಎಂದು ಆಚರಿಸಲಾಗುತ್ತದೆ. ಕರುಂಬಿತ್ತಿಲ್ ಶಿಬಿರವು ಬೆಳ್ಳಿಹಬ್ಬವನ್ನು ಆಚರಿಸಿದ ಸಂದರ್ಭದಲ್ಲಿ ನಡೆಸಿದ ಮಾತುಕತೆಯ ಆಯ್ದ ಭಾಗ 'ಮಯೂರ' ಓದುಗರಿಗಾಗಿ ಇಲ್ಲಿದೆ.

ಸಾಧ್ಯವಾಗಲಿಲ್ಲ. ಈ ಕೊರತೆಯನ್ನು ಅವರು ಕೊರಗನ್ನಾಗಿ ಮಾರ್ಪಡಿಸಿಕೊಳ್ಳಲಿಲ್ಲ. ತನ್ನ ಮಕ್ಕಳು ಸಂಗೀತ ಕ್ಷೇತ್ರದಲ್ಲಿ ಮುಂದುವರೆಯಬೇಕು ಎಂದು ಬಯಸಿ, ಅವರು ನಮಗೆಲ್ಲ ಪ್ರತಿದಿನ ಸಂಗೀತ ಪಾಠ ಮಾಡುತ್ತಿದ್ದರು. ಅಮ್ಮ ನಮಗೆ ಒಂದು ಷರತ್ತು ಹಾಕಿದ್ದರು. ಶಾಲೆಗೆ ಹೋಗಿ ಪದವಿಗಳನ್ನು ಸಂಪಾದಿಸುವುದು ಸರಿ, ನಂತರ ವೃತ್ತಿಯನ್ನು ಆಯ್ಕೆ ಮಾಡುವಾಗ ಒಂದೋ ಸಂಗೀತವನ್ನು ಆಯ್ಕೆ ಮಾಡಿಕೊಳ್ಳಬೇಕು ಅಥವಾ ಕೃಷಿಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು. ನಾನು ಹತ್ತನೇ ತರಗತಿಯವರೆಗೆ ಕರುಂಬಿತ್ತಿಲ್‌ನಲ್ಲಿ ಕೃಷಿ ಕ್ಷೇತ್ರದ ಕೆಲಸ ಕಾರ್ಯಗಳಿಗೆ ಅಪ್ಪನಿಗೆ ಸಹಾಯ ಮಾಡುತ್ತಿದ್ದೆ.